## ಯುವಮನದಲ್ಲಿ ಗಾಂಧಿ ಪ್ರೀತಿ

‘ಗಾಂಧಿ ಎಂಬುವ ಹೆಸರು’ (ಅ. 09) ಮುಖಪುಟ, ಇಂದಿನ ಯುವ ಮನಸ್ಸುಗಳ ನಡುವೆ ಅರಳಿರುವ ಗಾಂಧಿ ಪ್ರೀತಿಯನ್ನು ಸಮಗ್ರವಾಗಿ ದಾಖಲಿಸಿದೆ. ಗಾಂಧಿಯವರ ಸರಳತೆ, ಅಹಿಂಸೆ, ಪ್ರೀತಿ ಇಂದಿನ ತುರ್ತು ಅಗತ್ಯ. ಗಾಂಧಿ ಆದರ್ಶಗಳು ಎಲ್ಲರಲ್ಲೂ ಬೆರೆತರೆ ಈ ನಾಡು ಹಸಿರಾದೀತು. ಇಂದು ನಮಗೆ ಬೇಕಿರುವುದು ಮಾನವೀಯ ಧರ್ಮ. ಅದಕ್ಕೆ ಗಾಂಧಿವಾದವೇ ಸರಿಯಾದ ಮಾರ್ಗ.

—ವಾಸಣ್ಣ, ಧಾರವಾಡ

## ಎಲ್ಲರಿಗೂ ಮಾದರಿ

ನಡೆ ನುಡಿಯಲ್ಲಿ ಏಕಾಗ್ರತೆ ಸಾಧಿಸಿದ ಗಾಂಧೀಜಿಯವರ ಬದುಕು ಎಲ್ಲರಿಗೂ ಮಾದರಿ. ಅವರ ತತ್ವಾದರ್ಶಗಳು ಎಲ್ಲರ ಎದೆಗಿಳಿಯಬೇಕು. ಗಾಂಧೀಜಿಯವರ ವಿಚಾರಗಳು ಎಲ್ಲರ ಮನೆ ಮನ ತಲುಪಬೇಕು. ಅವರು ಹೇಳಿರುವ ಸತ್ಯ ಮತ್ತು ಅಹಿಂಸೆಯ ತತ್ವಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಈಗಿರುವ ದಾರಿ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ




## ಅದಮ್ಯ ಶಕ್ತಿ

ನನ್ನ ಪೀಳಿಗೆಯ (60–70ರ ದಶಕ) ಬಹುಪಾಲು ಸಹಪಾಠಿಗಳಾದಿಯಾಗಿ ಈಗಿನ ಪೀಳಿಗೆಯ ಯುವಕರಾದಿಯಾಗಿ ಗಾಂಧಿ ಎಂಬ ಮಹಾತ್ಮನನ್ನು ದ್ವೇಷಿಸುವವರು, ಇತರರು ದ್ವೇಷಿಸುವಂತೆ ಪ್ರಭಾವ ಬೀರುವವರು ಹೆಚ್ಚಾದ ಈ ಕಾಲಘಟ್ಟದಲ್ಲಿ ‘ಸುಧಾ’ ಮೂಲಕ ಈಗಿನ ಯುವಜನತೆಯ ಅಭಿಪ್ರಾಯಗಳನ್ನು ಓದಿದ ಮೇಲೆ ನಾನು ಅತಿಯಾಗಿ ಪ್ರೀತಿಸುವ ಗಾಂಧಿ ಎಂಬ ಅದಮ್ಯ ಶಕ್ತಿಯ ಬಗ್ಗೆ ಗೌರವ ಇನ್ನೂ ಹೆಚ್ಚಾಯಿತು. ಗಾಂಧಿ ಎಂಬುವ ಚೇತನ ಈಗಲೂ, ಮುಂದೆಯೂ ಪ್ರಸ್ತುತ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಪರ್ವತಾರೋಹಣದ ಅನುಭವ ಕಥನ

‘ಹಿಮಾಲಯದ ರಮ್ಯತಾಣ ರೋಲಿ ಖೋಲಿ’ (ಅ. 09, ವೈದ್ಯನಾಥ್ ಹೆಚ್.ಯು.) ಪ್ರವಾಸಕಥನ ಸುಂದರವಾಗಿದೆ. ಪ್ರವಾಸದ ಅನುಭವವನ್ನು, ಅದರ ಕಷ್ಟಗಳನ್ನು, ಕೊನೆಗೆ ಆಗುವ ಸಂತೋಷವನ್ನು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ. ಪ್ರಕೃತಿಗಿಂತ ನಾವು ದೊಡ್ಡವರಲ್ಲ ಎಂದು ಎಚ್ಚರಿಕೆ ನೀಡುವ ಪರ್ವತಾರೋಹಣದ ಬಗ್ಗೆ ಅತ್ಯದ್ಭುತ ವಿವರ ನೀಡಿದ್ದಾರೆ. ವರ್ಣರಂಜಿತ ಚಿತ್ರಗಳೂ ಗಮನಸೆಳೆದವು.

—ಅರ್ಜುನ್ ಮಯ್ಯ ಎಸ್., ತೀರ್ಥಹಳ್ಳಿ



## ಮಹಿಳಾ ಮಿಂಚು

‘ಚಕ್ ದೇ ಇಂಡಿಯಾ...’ (ಅ. 09, ಗಿರೀಶ ದೊಡ್ಡಮನಿ) ಮುಖಪುಟದಲ್ಲಿ ಪ್ರಕಟವಾದ ಮಹಿಳಾ ವಿಶ್ವಕಪ್ ಕ್ರಿಕೆಟ್ ಹಬ್ಬದ ಅಪರೂಪದ ವರ್ಣರಂಜಿತ ಫೋಟೊ, ಅವರ ನಗು ನೋಡುಗರ ಜೀವನೋತ್ಸಾಹವನ್ನು ಹೆಚ್ಚಿಸುವಂತಿದೆ.

ಕೆಲವು ವರ್ಷಗಳ ಹಿಂದೆ ಮಹಿಳೆಯರು ಬಾಕ್ಸಿಂಗ್, ಕುಸ್ತಿ, ಫುಟ್‌ಬಾಲ್, ಕ್ರಿಕೆಟ್ ಆಡಲು ಸಮರ್ಥರಲ್ಲ ಎಂಬ ಮಾತಿತ್ತು. ಅದೀಗ ಬದಲಾಗಿದೆ. ಎಲ್ಲಾ ರಂಗದಲ್ಲಿಯೂ ಮಿಂಚುತ್ತಿದ್ದಾರೆ. ಕ್ರೀಡಾಕ್ಷೇತ್ರದಲ್ಲಿಯೂ ಸ್ತ್ರೀಯರ ಮೇಲುಗೈಯಾಗಲಿ. ಭಾರತದ ಮಹಿಳಾ ಕ್ರಿಕೆಟ್ ತಂಡ ಉತ್ಸಾಹದಿಂದ ಮುಂದಡಿ ಇಡುತ್ತಾ ಸಾಗಲಿ.

—ಖಂಡಪರಶು ಮಾಗಡಿ

## ಕುಂದಾ ತಿಂದಷ್ಟ ಸಂತೋಷ್ ಆತು

‘ಮರೀಲಾರದ ಧಬಿಧಬಿ ನೆನಪು’ (ಅ. 09, ಸಂತೋಷ ತಾಮ್ರಪರ್ಣಿ) ‘ಚೆನ್ನುಡಿ’ ಓದಿ ಭಾಳ ಸಂತೋಷಾಯ್ತು. ಕುಂದಾ ತಿಂದಷ್ಟ ಸಂತೋಷ್ ಆತು. ಇದನ್ ಓದು ಮುಂದ ನಂಗ ನಮ್ಮ ಬಾಲ್ಯ, ನಮ್ಮಜ್ಜಿ, ಅಜ್ಜಿ ಮನಿ, ರವಾ ಉಂಡಿ ಎಲ್ಲಾ ಒಮ್ಮೆ ಕಣ್ ಮುಂದ ಬಂದ್ ಹೋದ್ವು. ಅವ್ರ ಉತ್ತರ ಕರ್ನಾಟಕದ ಭಾಷೆ ಅಂತೂ ಗಿಚ್ಚ್ ಅದರಿ. ಓದೂ ಮುಂದ ಬ್ಯಾಡ ಬ್ಯಾಡ ಅಂದ್ರು ನಗೂ ಬರ್ತದ. ಅದ್ರ ಜೊತೆಗೆ ಬ್ಯಾರೆದವ್ರಿಗೂ ಅರ್ಥ ಆಗ್ಲಿ ಅಂತ ಪದಗಳ ಅರ್ಥ ಬ್ಯಾರೆ ಕೊಟ್ಟಾರು. ಇಂಥವರಿಂದನ ಉತ್ತರ ಕರ್ನಾಟಕದ ಭಾಷೆ ಅಂದ ಛಂದ ಬೆಳಿತದ.

—ಗುಂಡೂರಾವ ಜೋಶಿ, ಧಾರವಾಡ

## ಚಿಂತನಶೀಲ ಬರಹ

‘ವ್ಯತಿರಿಕ್ತ ಚಿತ್ರಣ ಕೈಬಿಡಿ’ (ಅ. 09, ರಶ್ಮಿ ಎಸ್) ‘ನಿರ್ಮೊಡನೆ’, ಧಾರಾವಾಹಿಗಳ ನಿರ್ಮಾಪಕ ನಿರ್ದೇಶಕರಿಗೆ ಕೈಪಿಡಿ ಆಗಲಿ. ಮಹಿಳೆಯರ ಪಾತ್ರಗಳು, ಸೌಂದರ್ಯ, ಶೋಷಣೆ, ಸೇಡು, ಮದುವೆ, ಆಗಿನ ಸಂಸಾರ, ಮಡಿವಂತಿಕೆ ಚೌಕಟ್ಟು ಬಿಟ್ಟು, ಇಂದಿನ ಕಾಲಮಾನದ ಸುತ್ತ ಸೃಜನಶೀಲ ಹಾಗೂ ಮಹತ್ವಾಕಾಂಕ್ಷೆಯ ಧಾರಾವಾಹಿಗಳ ಪ್ರಭಾವ ನಮ್ಮ ಬದುಕಿಗೆ ಸಮೀಪವಿರಬೇಕು ಎನ್ನುವ ಉಲ್ಲೇಖ ಕಹಿ ಸತ್ಯ.

ನೋಡುಗರಿಗೆ ಬದಲಾಗುತ್ತಿರುವ ಸಾಮಾಜಿಕ ಮಾನದಂಡಗಳ ಪರಿಣಾಮ ಹಾಗೂ ಎಚ್ಚರಿಕೆ ನೀಡಿದಲ್ಲಿ ಧಾರಾವಾಹಿಗಳ ಗುಣಮಟ್ಟ ಹೆಚ್ಚಿಸಲು ಸಾಧ್ಯ. ಲೇಖನ ಚಿಂತನಶೀಲವಾಗಿದೆ.

—ಕಾವ್ಯ ಭಾರದ್ವಾಜ್, ಬೆಂಗಳೂರು

## ಸೂಕ್ಷ್ಮವಾಗಿ ಗಮನಿಸಲಿ

ಈಗಿನ ಧಾರಾವಾಹಿಗಳ ಕುರಿತು ನಾನು ಬಹಳಷ್ಟು ಜನರ ಜೊತೆ ವಾಗ್ವಾದ ನಡೆಸಿದ್ದೇನೆ. ಆಗ ಅವರು ಹೇಳುವುದು, ‘ಜಗತ್ತು ಇದ್ದಂತೆ ತೋರಿಸುತ್ತಿದ್ದೇವೆ’ ಅಂತ. ಆದರೆ ಧಾರಾವಾಹಿ ತಯಾರಿಸುವವರು ಒಂದು ಬಾರಿ ಕಣ್ಣು ಬಿಟ್ಟು ತಮ್ಮ ಸುತ್ತಲಿನ ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಒಳಿತು. ಇಂದು ‘ಮದುವೆ’ ಎನ್ನುವುದೇ ಹೆಣ್ಣಿಗೆ ಅನಿವಾರ್ಯವಾಗಿ ಉಳಿದಿಲ್ಲ. ಹೀಗಿರುವಾಗ ಪುರಾತನ ಕಾಲದ ಕಟ್ಟುಪಾಡುಗಳನ್ನು ಈಗಿನ ಆಧುನಿಕ ಮಹಿಳೆಯರ ಮೇಲೆ ಬಲವಂತವಾಗಿ ಹೇರಲು ಪ್ರಯತ್ನ ಪಡುತ್ತಿರುವ ಧಾರಾವಾಹಿಗಳಿಂದ ಯಾರಿಗೆ ಒಳ್ಳೆಯದಾಗುವುದೋ ಗೊತ್ತಿಲ್ಲ. ನನಗಂತೂ ರಕ್ತ ಕುದಿಯುತ್ತದೆ. ಏನೂ ಮಾಡಲಾಗುವುದಿಲ್ಲವಲ್ಲ ಎಂಬ ಅಸಹಾಯಕತೆ ಕಾಡುತ್ತದೆ. ‘ಸುಧಾ’ದಲ್ಲಿ ನನ್ನ ಅಭಿಪ್ರಾಯವನ್ನು ಅನುಮೋದಿಸುವಂತಹ ಬರಹ ಬಂದಿದ್ದು ಬಹಳ ಖುಷಿಯಾಯಿತು.

—ಕೆ.ಎ. ಸೌಮ್ಯ

## ‘ಪ್ರೀತಿ’ ಅಮರ

‘ಪ್ರಶ್ನೆ’ (ಅ. 09, ಸಿ.ಎನ್. ಮುಕ್ತಾ) ಕಥೆ ಮನಕಲಕುವಂತಿತ್ತು. ಬೃಂದಾ ಪ್ರಶ್ನೆಗೆ ರಾಮ್ ಗೋಪಾಲ್ ಉತ್ತರ, ಕಥೆ ಸುಖಾಂತ್ಯವಾದದ್ದು ನಿಜವಾದ ‘ಪ್ರೀತಿ’ ಅಮರ ಎಂಬುದನ್ನು ತೋರಿಸಿತು.

—ಚಲುವನಳ್ಳಿ ರಾಜಶೇಖರ್, ಹಾಸನ

## ಮನಸ್ಸಿಗೆ ಹತ್ತಿರವಾಯಿತು



ವಾಸ್ತವತೆಯ ಮೂಸೆಯಲ್ಲಿ ತುಂಬಾ ಚೆನ್ನಾಗಿ ಮೂಡಿಬಂದ ಕಥೆ. ಬೃಂದಾ ಹಾಗೂ ರಾಮ್ ಗೋಪಾಲ್ ಪಾತ್ರ ಪ್ರೌಢತೆಯಿಂದ ಕೂಡಿದ್ದು, ಮನಸ್ಸಿಗೆ ಹತ್ತಿರವಾಯಿತು.

—ಭಾರತೀ ಗಂಗಾಧರ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in